ದಿ: 10-10-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

2. ಸದರಿ ವ್ಯಕ್ತಿಯ ಹೆಸರು ಮತ್ತುವಿಳಾಸ ಕೇಳಲಾಗಿ ಅವರು ತನ್ನ ಹೆಸರು ರಮೇಶ ತಂದೆ ಹನುಮಂತಪ್ಪ, ವಾಸಃ ಹೊನ್ನೂರುವಡ್ಡರಹಟ್ಟಿ ಹೊನ್ನಾಳಿ ತಾಲ್ಲೂಕು ಅಂತ ತಿಳಿಸಿದರು. ಅವರನ್ನು ವಿಚಾರಿಸಲಾಗಿ ಐಶಾರಾಮಿ ಜೀವನವನ್ನು ನಡೆಸಲು ಹಣ ಸಾಕಾಗುತ್ತಿರುವುದಿಲ್ಲ ಆದ್ದರಿಂದ ನಾನು ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಇತರರಿಗೆ ಗಾಂಜಾ ಮಾರಾಟ ಮಾಡಿ ಹಣ ಗಳಿಸಲು ಬಂದಿರುತ್ತೇನೆ ಅಂತ ತಿಳಿಸಿದರು. ನಂತರ ಪಂಚರ ಸಮಕ್ಷಮ ಅವರ ಕೈಯಲ್ಲಿದ್ದ ತಿಳಿ ಹಳದಿ ಬಣ್ಣದ ಚೀಲದಲ್ಲಿ ಏನಿದೆ ಅಂತ ವಿಚಾರಿಸಲಾಗಿ ಗಾಂಜಾ ಸೊಪ್ಪು ಇರುವುದಾಗಿ ತಿಳಿಸಿದನು. ಆಗ ಆ ಚೀಲವನ್ನು ತೆಗೆದು ನೋಡಲಾಗಿ ಅದರಲ್ಲಿ ಗಾಂಜಾ ಸೊಪ್ಪಿನ ಗಾಟು ವಾಸನೆ ಬರುತ್ತಿತ್ತು ಆದ್ದರಿಂದ ಅದು ಗಾಂಜಾ ಅಂತ ಕಂಡು ಬಂದಿತು. ಆ ಗಾಂಜಾ ಸೊಪ್ಪು, ಬೀಜ ಮೊಗ್ಗಿನಿಂದ ಕೂಡಿತ್ತು. ನಂತರ ಸದರಿ ಗಾಂಜಾವನ್ನು ಪಂಚರ ಸಮಕ್ಷಮ ಚಾಸಾ-14 ರವರ ಮುಖಾಂತರ ತೂಕದ ಯಂತ್ರದಲ್ಲಿ ಗಾಂಜಾವನ್ನು ತೂಕ ಮಾಡಿದಾಗ ಅದು 150 ಗ್ರಾಂ ಗಾಂಜಾ ಇತ್ತು. ಸದರಿ ಗಾಂಜಾವನ್ನು ಒಂದು ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ಅರಗಿನಿಂದ ಸೀಲ್ ಮಾಡಿ DCB ಅಂತ ಸೀಲ್ ಮಾಡಿ ಅದರ ಮೇಲೆ ಲೇಬಲ್ ಬರೆದು ಅದಕ್ಕ ಪಂಚರ, ಪತ್ರಾಂಕಿತ ಅಧಿಕಾರಿಗಳ ಸಹಿ ಪಡೆದು ಮತ್ತು ನಾನು ಅದಕಕ್ಷ್ ಸಹಿ ಮಾಡಿ ಚೀಟಿಯನ್ನು ಅಂಟಿಸಿದ್ದೇನೆ. ಗಾಂಜಾ ಇರುವ ಬ್ಯಾಗ್ ನಲ್ಲಿ ಕೆಲವು ಪ್ಲಾಸ್ಟಿಕ್ ಕವರ್ ಗಳು ಇದ್ದು ಈ ಪ್ಲಾಸ್ಟಿಕ್ ಕವರ್ ಗಳ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ ಇವುಗಳನ್ನು ಗಾಂಜಾ ಮಾರಾಟ ಮಾಡುವಾಗ ಅವರಿಗೆ ದುಡ್ಡಿಗೆ ಅನುಗುಣವಾಗಿ ಗಾಂಜಾವನ್ನು ಹಾಕಿ ಕೊಡಲು ಇಟ್ಟುಕೊಂಡಿರುತ್ತೇನೆ ಅಂತ ತಿಳಿಸಿದರು. ಸದರಿ ಕವರ್ ಗಳನ್ನು ಪರಿಶೀಲಿಸಲಾಗಿ 4x3 ಉದ್ದ-ಅಗಲ ಮತ್ತು 8 ಬಿಳಿ ಪಾಲಿಥಿನ್ ಪ್ಲಾಸ್ಟಿಕ್ ಕವರ್ ಗಳು ಮತ್ತು 6x5 ಉದ್ದ-ಅಗಲದ 3 ಬಿಳಿ ಪಾಲಿಥಿನ್ ಪ್ಲಾಸ್ಟಿಕ್ ಕವರ್ ಗಳು ಇದ್ದವು. ಅವುಗಳನ್ನು ಮುಂದಿನ ಕ್ರಮಕ್ಕಾಗಿ ವಶಕ್ಕೆ ಪಡೆದುಕೊಂಡಿದ್ದೇನೆ. ನಂತರ ಆರೋಪಿಯ ಬಳಿ ಗಾಂಜಾ

ಇರುವ ಬಗ್ಗೆ ಮತ್ತು ಗಾಂಜಾ ಮಾರಾಟ ಮಾಡಿ ಪಡೆದ ಹಣದ ಬಗ್ಗೆ ಅಂಗ ಶೋಧನೆ ಮಾಡಲು ಆರೋಪಿಗೆ ನಾನು ಅಂಗ ಶೋಧನೆ ಮಾಡಬೇಕೋ ಅಥವಾ ಪತ್ರಾಂಕಿತ ಅಧಿಕಾರಿಗಳು ಮಾಡಬೇಕೋ ಅಂತ ಕೇಳಿ ನೋಟೀಸು ಜಾರಿ ಮಾಡಿರುತ್ತೇನೆ. ಆ ನೋಟೀಸನ್ನು ಈಗ ನೋಡುತ್ತಿದ್ದು, ಅದರಲ್ಲಿ ನನ್ನ ಸಹಿ ನೋಡಿ ಗುರುತಿಸುತ್ತೇನೆ, ನೋಟೀಸನ್ನು ನಿಪಿ-8 ಅಂತ, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಅಂತ ಗುರುತಿಸಲಾಯಿತು. ಅದಕ್ಕೆ ಆರೋಪಿ ನನಗೆ ಪತ್ರಾಂಕಿತ ಅಧಿಕಾರಿಗಳು ಅಂಗ ಶೋಧನೆ ಮಾಡಲಿ ಅಂತ ಒಪ್ಪಿಗೆ ಕೊಟ್ಟು ನಿಪಿ-8 ಕ್ಕೆ ಸಹಿ ಮಾಡಿದರು. ಆ ಸಹಿಯನ್ನು ಈಗ ನೋಡಿ ಗುರುತಿಸುತ್ತೇನೆ. ನಿಪಿ-8 ರ ಮೇಲೆ ಇರುವ ಆರೋಪಿಯ ಸಹಿಯನ್ನು ನಿಪಿ-8(ಬಿ) ಅಂತ ಗುರುತಿಸಲಾಯಿತು. ನಂತರ ಪ್ರತ್ರಾಂಕಿತ ಅಧಿಕಾರಿಗಳು ಚಾಸಾ-2 ರವರು ಆರೋಪಿಯ ಅಂಗ ಶೋಧನೆಯನ್ನು ಮಾಡಲಾಗಿ ಆರೋಪಿಯ ಶರ್ಟಿನ ಎದೆ ಜೇಬಿನಲ್ಲಿ 100 ರೂಪಾಯಿಯ 5 ನೋಟುಗಳು ಇದ್ದು, ಈ ಹಣದ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ ಇವು ಗಾಂಜಾ ಮಾರಾಟ ಮಾಡಿ ಗಳಿಸಿದ ಹಣ ಅಂತ ತಿಳಿಸಿದರು. ಸದರಿಯವರ ಒಳಉಡುಪಿನಲ್ಲಿ ಒಂದು ಮೊಬೈಲ್ ಫೋನ್ ಇದ್ದು, ಅದನ್ನು ಪರಿಶೀಲಿಸಿ ನೋಡಿದಾಗ ಅದು MUPHONE ಇದ್ದು ಅದರಲ್ಲಿ ಏರಟೆಲ್ ಕಂಪನಿಯ ಸಿಮ್ ಇತ್ತು. ನಂತರ ಸದರಿಯವರಿಗೆ ಈ ಗಾಂಜಾವನ್ನು ಎಲ್ಲಿಂದ ತಂದು ಮಾರಾಟ ಮಾಡುತ್ತಿದ್ದ ಬಗ್ಗೆ ವಿಚಾರಿಸಲಾಗಿ ಅವರು ಗಾಂಜಾವನ್ನು ಮುದೇವರ ಬಸಣ್ಣ ಹರಗನಹಳ್ಳಿ ಗ್ರಾಮ ಹೊನ್ನಾಳಿ ತಾಲ್ಲೂಕಿನ ಇವರಿಂದ ತಂದು ಮಾರಾಟ ಮಾಡುತ್ತೇನೆ, ಬಸಣ್ಣ ಇವರು ತಮ್ಮ ಜಮೀನಿನಲ್ಲಿ ಗಾಂಜಾವನ್ನು ಬೆಳೆದಿದ್ದು, ನನಗೆ ಗಾಂಜಾ ಮಾರಾಟ ಮಾಡಲು ಬೇಕಾದಾಗ ಅವರಿಗೆ ಫೋನ್ ಮಾಡಿ ಗಾಂಜಾ ತಂದು ಮಾರಾಟ ಮಾಡುತ್ತೇನೆ ಎಂದು ತಿಳಿಸಿದರು ಮತ್ತು ನಮ್ಮ ಜೊತೆ ನೀವು ಬಂದರೆ ಬಸಣ್ಣರವರು ಗಾಂಜಾ ಬೆಳೆದ ಜಮೀನಿನನ್ನು ತೋರಿಸುವುದಾಗಿ ತಿಳಿಸಿದರು. ನಂತರ ಈ ಬಗ್ಗೆ ಸ್ಥಳದಲ್ಲಿ ಪಂಚನಾಮೆ ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಮಾಡಿದೆವು. ಆ ಮಹಜರನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಮಹಜರನ್ನು ನಿಪಿ-9 ಅಂತ, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಅಂತ

ಗುರುತಿಸಲಾಯಿತು. ಮಹಜರ ಮಾಡುವ ಕಾಲಕ್ಕೆ ಪೋಟೋಗಳನ್ನು ಚಾಸಾ-19 ರವರಿಂದ ತೆಗೆಸಿದ್ದೇನೆ. ಆ ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-10 ರಿಂದ 12 ಅಂತ ಗುರುತಿಸಲಾಯಿತು. ನಿಪಿ-10 ಮತ್ತು 11 ರ ಪೋಟೋಗಳಲ್ಲಿ ಆರೋಪಿ ರಮೇಶ ಮತ್ತು ಗಾಂಜಾ, ಪತ್ರಾಂಕಿತ ಅಧಿಕಾರಿಗಳು ತೂಕ ಮಾಡುತ್ತಿದ್ದ ಸಿಬ್ಬಂದಿಗಳು, ತೂಕದ ಯಂತ್ರ ಕಂಡು ಬರುತ್ತದೆ. ನಿಪಿ-12 ರಲ್ಲಿ ಪತ್ರಾಂಕಿತ ಅಧಿಕಾರಿಗಳು ಆರೋಪಿ ರಮೇಶರವರ ಅಂಗ ಶೋಧನೆ ಮಾಡುತ್ತಿರುವುದು ಕಂಡು ಬರುತ್ತದೆ. ಆರೋಪಿ ರಮೇಶನ ಬಳಿ ಇದ್ದ 100 ರೂಪಾಯಿ ಮುಖ ಬೆಲೆಯ 5 ನೋಟುಗಳನ್ನು ಈಗ ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡಿ ಗುರುತಿಸುತ್ತೇನೆ. 100 ರೂಪಾಯಿ ಮುಖ ಬೆಲೆಯ 5 ನೋಟುಗಳನ್ನು ಒಟ್ಟಾಗಿ ಮು.ಮಾ.1 ಅಂತ ಗುರುತಿಸಲಾಯಿತು. 8 ಸಣ್ಣ ಖಾಲಿ ಪಾಲಿಥಿನ್ ಕವರ್ ಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಒಟ್ಟಾಗಿ ಮು.ಮಾ.2 ಅಂತ ಗುರುತಿಸಲಾಯಿತು. ದೊಡ್ಡ 3 ಖಾಲಿ ಪಾಲಿಥಿನ್ ಕವರ್ ಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಒಟ್ಟಾಗಿ ಮು.ಮಾ.3 ಅಂತ ಗುರುತಿಸಲಾಯಿತು. ಆರೋಪಿಯ ಕೈಯಲ್ಲಿದ್ದ ತಿಳಿ ಹಳದಿ ಬ್ಯಾಗ್ ನ್ನು ಈಗ ನೋಡುತ್ತಿದ್ದು, ಅದನ್ನು ಮು.ಮಾ.4 ಅಂತ ಗುರುತಿಸಲಾಯಿತು. ನಿಪಿ-10 ರಿಂದ 12 ರ ಪೋಟೋಗಳಲ್ಲಿ ಮು.ಮಾ.4 ಕಂಡು ಬರುತ್ತದೆ. ಆರೋಪಿಯ ಬಳಿ ಇದ್ದ ಮೊಬೈಲ್ (ಸಿಮ್ ಅದರೊಳಗೆ ಇರುತ್ತದೆ)ನ್ನು ಈಗ ನೋಡುತ್ತಿದ್ದು, ಅದನ್ನು ಮು.ಮಾ.5 ಅಂತ ಗುರುತಿಸಲಾಯಿತು.

3. ನಂತರ ಆರೋಪಿತನು ಬಸಣ್ಣರವರು ಗಾಂಜಾ ಬೆಳೆದಿರುವ ಜಮೀನಿನನ್ನು ತೋರಿಸುವುದಾಗಿ ತಿಳಿಸಿದಂತೆ ಪಂಚರು, ಪತ್ರಾಂಕಿತ ಅಧಿಕಾರಿಗಳು, ಆರೋಪಿ ಮತ್ತು ಸಿಬ್ಬಂದಿಗಳು ಇಲಾಖಾ ಜೀಪಿನಲ್ಲಿ ಚಾಸಾ-13 ರಿಂದ 17 ರವರನ್ನು ಖಾಸಗಿ ಕಾರಿನಲ್ಲಿ ಕೂರಿಸಿಕೊಂಡು ತನಿಖೆಗೆ ಬೇಕಾದ ಎಲ್ಲಾ ಪರಿಕರಣೆಗಳನ್ನು ತೆಗೆದುಕೊಂಡು ಮಧ್ಯಾಹ್ಣ 12.00 ಗಂಟೆಗೆ ಸ್ವಾಮಿ ವಿವೇಕಾನಂದ ಬಡಾವಣೆಯಿಂದ ಹೊರಟು ಆರೋಪಿ ತೋರಿಸಿದ ಮಾರ್ಗದಂತೆ ಎನ್.ಹೆಚ್. 4 ರಸ್ತೆ ಹರಿಹರ ಬೈ ಪಾಸ್

ನ ಮುಖಾಂತರ ಹೊನ್ನಾಳಿ ರಸ್ತೆಗೆ ಹೋಗಿ ಮಲೆಬೆನ್ನೂರು, ಅರಕೆರೆ, ಹೀರೆಗೋಣಿಗೆರೆ ಮುಖಾಂತರ ಹರಗನಹಳ್ಳಿ ಬಸ್ ಸ್ಟಾಪ್ ಹತ್ತಿರ ಬಂದಾಗ ಆರೋಪಿ ವಾಹನವನ್ನು ನಿಲ್ಲಿಸಲು ಹೇಳಿರುತ್ತಾನೆ.

ಈ ಹಂತದಲ್ಲಿ ಮಧ್ಯಾಹ್ನ 2.10 ಗಂಟೆ ಆಗಿರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿ: 10-10-2025 ರಂದು ಮಧ್ಯಾಹ್ನ ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

4. ಹರಗನಹಳ್ಳಿ ಬಸ್ ನಿಲ್ದಾಣದ ಹತ್ತಿರ ನಾವು ಬಂದಾಗ ಸಮಯ ಮಧ್ಯಾಹ್ನ 1.30 ಗಂಟೆ ಆಗಿತ್ತು. ಸ್ಥಳದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳಾದ ಚಾಸಾ-8 ರವರನ್ನು ಬರಮಾಡಿಕೊಂಡು ಅವರಿಗೆ ಮಾಹಿತಿಯನ್ನು ತಿಳಿಸಿದೆವು. ಆರೋಪಿಯು ಗಾಂಜಾವನ್ನು ಬಸಣ್ಣರವರ ಜಮೀನಿಂದ ತಂದು ಮಾರಾಟ ಮಾಡುತ್ತಿರುವುದಾಗಿ ಹೇಳಿದ್ದು ಮತ್ತು ಸದರಿ ಜಮೀನಿನನ್ನು ತೋರಿಸುವುದಾಗಿ ಹೇಳಿದ್ದು, ಆ ಸಮಯದಲ್ಲಿ ಅವರಿಗೆ ಜಮೀನಿನ ಬಗ್ಗೆ ಮಾಹಿತಿಯನ್ನು ನೀಡುವಂತೆ ಮನವಿಯನ್ನು ನೀಡಿರುತ್ತೇನೆ. ಗ್ರಾಮಲೆಕ್ಕಾಧಿಕಾರಿಗಳಿಗೆ ನೀಡಿದ ನೋಟಿಸ್ಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-13 ಅಂತ, ಸಾಕ್ಷಿಯ

ಸಹಿಯನ್ನು ನಿಪಿ-13(ಎ) ಅಂತ ಗುರುತಿಸಲಾಯಿತು. ನಂತರ ಆರೋಪಿಯನ್ನು ಹಿಂಬಾಲಿಸಿಕೊಂಡು ಹರಗನಹಳ್ಳಿ ಬಸ್ ನಿಲ್ದಾಣದ ಪಶ್ಚಿಮ ದಿಕ್ಕಿಗೆ ಅರ್ಧ ಕಿ.ಮೀ. ಅಂತರದಲ್ಲಿ ಆರೋಪಿ ನಮ್ಮನ್ನು ಕರೆದುಕೊಂಡು ಹೋಗಿ ತುಂಗಾಭದ್ರಾ ನದಿಯಿಂದ 60 ಅಡಿ ದೂರ ಇರುವಂತೆ ಸೇವಂತಿಗೆ ಹೂವು ಇರುವ ಜಮೀನಿನ ಹತ್ತಿರ ಕರೆದುಕೊಂಡುಹೋಗಿದ್ದು, ಆ ಜಮೀನಿನಲ್ಲಿ ಸುತ್ತಲೂ ತೊಗರಿ ಬೆಳೆ ಬೆಳೆದಿದ್ದು ಆ ಜಮೀನಿನ ಉತ್ತರ ದಿಕ್ಕಿನ ಮಧ್ಯದಲ್ಲಿ ಕರೆದುಕೊಂಡು ಹೋಗಿ 4 ಗಾಂಜಾ ಗಿಡಗಳನ್ನು ತೋರಿಸಿದರು. ಸ್ಥಳದಲ್ಲಿದ್ದ ಚಾಸಾ-8 ರವರಿಗೆ ಈ ಜಮೀನು ಯಾರಿಗೆ ಸೇರಿದ್ದು ಅಂತ ವಿಚಾರ ಮಾಡಿದಾಗ ಅವರು ಪರಿಶೀಲಿಸಿ ಸದರಿ ಜಮೀನು ಗೌರಮ್ಮ ಗಂಡ ರಾಮಚಂದ್ರಪ್ಪ ಇವರದ್ದಾಗಿದ್ದು ಅದರ ಸರ್ವೇ ನಂಬರ 23/4 ಅಂತ ತಿಳಿಸಿದರು. ನಂತರ ಆರೋಪಿ ತೋರಿಸಿದ 4 ಗಾಂಜಾ ಗಿಡಗಳನ್ನು ಬೇರು ಸಮೇತ ಕಿತ್ತು ಪರಿಶೀಲಿಸಿದಾಗ 3 ಗಿಡಗಳು 5-6 ಅಡಿ ಎತ್ತರದವರೆಗೆ ಬೆಳೆದಿದ್ದು, 01 ಗಿಡ 2 ವರೆ ಅಡಿ ಎತ್ತರ ಬೆಳೆದಿದ್ದು, ಅವು ತೆನೆಬರಿತ ಗಿಡಗಳಾಗಿದ್ದವು. ನಂತರ ಸಿಬ್ಬಂದಿ ಮೂಲಕ 4 ಗಾಂಜಾ ಗಿಡಗಳಿಂದ ಎಲೆಗಳನ್ನು ಮತ್ತು ಕಾಂಡ ಬೇರುಗಳನ್ನು ಪ್ರತ್ಯೇಕಿಸಿ ಸಿಬ್ಬಂದಿಯಾದ ಚಾಸಾ-13 ರವರ ಮುಖಾಂತರ ಗಾಂಜಾವನ್ನು ತೂಕ ಮಾಡಿಸಲಾಗಿ ಹಸಿ ತೆನೆಬರಿತ ಗಾಂಜಾ 2730 ಗ್ರಾಂ ಇದ್ದು ಹಸಿ ಮತ್ತು ಕಾಂಡ ಬೇರಿನ ತೂಕ 1600 ಗ್ರಾಂ ಇತ್ತು. ಇವುಗಳನ್ನು ಪ್ರತ್ಯೇಕವಾಗಿ ಗೊಬ್ಬರ ಚೀಲದಲ್ಲಿ ಹಾಕಿ ದಾರದಿಂದ ಹೊಲೆದು DCB ಅಂತ ಅರಗಿನಿಂದ ಸೀಲ್ ಹಾಕಲಾಯಿತು ಹಾಗೂ ಎರಡು ಲೇಬಲ್ ಗಳ ಮೇಲೆ ವಿವರಗಳನ್ನು ಬರೆದು ಪಂಚರ, ಪತ್ರಾಂಕಿತ ಅಧಿಕಾರಿಗಳ ಸಹಿಯನ್ನು ಪಡೆದುಕೊಂಡು ಮತ್ತು ನಾನು ಅದರ ಮೇಲೆ ಸಹಿಯನ್ನು ಮಾಡಿ ಅದನ್ನು ಅಂಟಿಸಲಾಯಿತು. ಈ ಬಗ್ಗೆ ಸ್ಥಳದಲ್ಲಿ ಪಂಚನಾಮೆಯನ್ನು ಮಧ್ಯಾಹ್ನ 2.15 ರಿಂದ 4.00 ಗಂಟೆಯವರೆಗೆ ಲ್ಯಾಪಟಾಪ್ ನಲ್ಲಿ ಟೈಪ್ ಮಾಡಿಸಲಾಯಿತು. ಪಂಚನಾಮೆಯ ಸಮಯದಲ್ಲಿ ಪೋಟೋಗಳನ್ನು ಚಾಸಾ-14 ರವರ ಮೂಲಕ ತೆಗೆಸಿರುತ್ತೇನೆ. ಆ ಅಮಾನತ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-14 ಅಂತ, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಅಂತ ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆಸಿದ ಪೋಟೋಗಳನ್ನು ಈಗ

ನೋಡುತ್ತಿದ್ದು, ಅವುಗಳನ್ನು ನಿಪಿ-15 ರಿಂದ 17 ಅಂತ ಗುರುತಿಸಲಾಯಿತು. ಈ 03 ಫೋಟೋಗಳಲ್ಲಿ ಗಾಂಜಾ ಗಿಡ ಕಿತ್ತಿರುವುದು ಮತ್ತು ತೂಕ ಮಾಡುತ್ತಿರುವುದು ಮತ್ತು ಕಾಂಡ ಮತ್ತು ಬೇರುಗಳನ್ನು ಬೇರ್ಪಡಿಸಿದ್ದು ಹಾಗೂ ಪಂಚರು, ಪತ್ರಾಂಕಿತ ಅಧಿಕಾರಿಗಳು, ಆರೋಪಿತರು ಹಾಗೂ ಸಿಬ್ಬಂದಿಗಳು ಕಂಡು ಬರುತ್ತೇವೆ. ಎರಡು ಪಂಚನಾಮೆಗಳ ಸಮಯದಲ್ಲಿ ತೆಗೆದ ಫೋಟೋಗಳ ಬಗ್ಗೆ ಹಾಜರುಪಡಿಸಿದ ಸಿಡಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-18 ಅಂತ ಗುರುತಿಸಲಾಯಿತು. ನಂತರ ಆರೋಪಿ ಮತ್ತು ಮಾಲುಗಳೊಂದಿಗೆ ಠಾಣೆಗೆ ಬಂದು ಆರೋಪಿಯ ಸ್ವಇಚ್ಛೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಯ ಸ್ವಇಚ್ಛೆ ಹೇಳಿಕೆಯ ಭಾಗವನ್ನು ನಿಪಿ-19 ಅಂತ, ಸಾಕ್ಷಿಯ ಸಹಿಯನ್ನು ನಿಪಿ-19(ಎ), ಆರೋಪಿಯ ಸಹಿಯನ್ನು ನಿಪಿ-19(ಬಿ) ಅಂತ ಗುರುತಿಸಲಾಯಿತು. ನಂತರ ಚಾಸಾ-14 ಮತ್ತು 19 ರವರಿಂದ 65B ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-19 ರವರಿಂದ ಪಡೆದುಕೊಂಡ 65B ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-20 ಅಂತ, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಅಂತ ಗುರುತಿಸಲಾಯಿತು. ಚಾಸಾ-14 ರವರಿಂದ ಪಡೆದುಕೊಂಡ 65B ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-21 ಅಂತ, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಅಂತ ಗುರುತಿಸಲಾಯಿತು. ನಂತರ ಆರೋಪಿ ಮತ್ತು ಮಾಲುಗಳನ್ನು ಮುಂದಿನ ಕ್ರಮಕ್ಕಾಗಿ ವಿದ್ಯಾನಗರ ಪೊಲೀಸ್ ಠಾಣೆಯ ಎಸ್.ಹೆಚ್.ಓ. ಮುಂದೆ ಲಿಖಿತ ಪತ್ರದ ಮೂಲಕ ಹಾಜರುಪಡಿಸಿರುತ್ತೇನೆ. ಆ ಲಿಖಿತ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-22 ಅಂತ, ಸಾಕ್ಷಿಯ ಸಹಿಯನ್ನು ನಿಪಿ-22(ಎ) ಅಂತ ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನಾವು ಆ ದಿನ ದಸ್ತಗಿರಿ ಮಾಡಿದ ಆರೋಪಿ ಇರುತ್ತಾನೆ. ಮು.ಮಾ.1 ರಿಂದ 5 ರ ಮೇಲೆ ಅಂಟಿಸಿದ ಚೀಟಿಯ ಮೇಲೆ ನನ್ನ ಸಹಿ ಇರುತ್ತವೆ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ</u>**:

ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುವುದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.